**CW : 7**

PW : 5

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.3726/2018

| | | |
|---|---|---|
| ಸಾಕ್ಷಿದಾರರ ಹೆಸರು | : | ಶ್ರೀ ದಾಮೋದರ ಆಚಾರ್ಯ |
| ತಂದೆಯ ಹೆಸರು | : | ಅಣ್ಣಿ ಆಚಾರ್ಯ |
| ಪ್ರಾಯ | : | 63 ವರ್ಷ |
| ಉದ್ಯೋಗ | | ಚಿನ್ನದ ಕೆಲಸ |
| ವಾಸಸ್ಥಳ | : | ಬಂಟ್ವಾಳ |

ದಿನಾಂಕಃ**19.02.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸುಮಾರು 15 ವರ್ಷಗಳಿಂದ ಬಂಟ್ವಾಳದ ತನಿಷ್ಕ ಜ್ಯುಯಲರ್ಸ್ ನಲ್ಲಿ ಕೆಲಸ ಮಾಡುತ್ತಿದ್ದೇನೆ. ಪುತ್ತೂರು ಗ್ರಾಮಾಂತರ ಪೋ. ಠಾಣೆಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಸುಮಾರು ಸಲ ಪೊಲೀಸರು ನಮ್ಮ ಅಂಗಡಿಗೆ ಬಂದಿರುತ್ತಾರೆ.

ಸಾಕ್ಷಿಗೆ ನಿಪಿ-3 ದಾಖಲೆ ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರತಿಸಿದ್ದು ಅದನ್ನು ನಿಪಿ-3 ಬಿ ಎಂದು ಗುರುತಿಸಲಾಯಿತು. ನಿಪಿ-3 ಕ್ಕೆ ನನ್ನ ಅಂಗಡಿಯಲ್ಲಿ ಸಹಿ ಮಾಡಿದ್ದೇನೆ. ಆ ದಿನ ಪೊಲೀಸರು ಒಂದು ಚಿನ್ನವನ್ನು ತಂದು ತೋರಿಸಿದ್ದು ನಾನು ಅದು ಸರಿಯಿದೆ ಎಂದು ತಿಳಿಸಿದ್ದೇನೆ. ಅದು ಯಾವ ತರಹದ ಚಿನ್ನ ಎಂದು ನೆನಪಿಲ್ಲ. ನಾನು ಪರಿಶೀಲಿಸಿದ ಚಿನ್ನವನ್ನು ಗುರುತಿಸಲು ಆಗುವುದಿಲ್ಲ.

ಮಾರಿಯಪ್ಪನ್ ಎನ್ನುವವರ ಪರಿಚಯ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಃ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸ.ಸ.ಅ. ರವರಿಂದಃ**

**CW : 7**

PW : 5

ದಿ.9-4-2010 ರಂದು ಬಂಟ್ವಾಳ ಪೊಲೀಸ್ ವೃತ್ತ ಕಚೇರಿಯಲ್ಲಿ ನಿಪಿ-3 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಸರಿ. ಆ ದಿನ ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾರಿಯಪ್ಪನ್ ಎನ್ನುವವರು ಹಾಜರುಪಡಿಸಿದ ಚಿನ್ನದ ಸರ, ಚಿನ್ನದ ನೆಕ್ಲೇಸ್, 2 ಚಿನ್ನದ ಕೈ ಬಳೆಗಳು, 5 ಚಿನ್ನದ ಉಂಗುರ ಹಾಗೂ ಒಂದು ಜೊತೆ ಕಿವಿಯ ರಿಂಗನ್ನು ಪರಿಶೀಲಿಸಿ ತೂಕಮಾಡಿ ದೃಡೀಕರಿಸಿದ್ದೇನೆ ಎಂದರೆ ಸರಿ.

<u>ಪಾಟೀ ಸವಾಲುಃಆರೋಪಿತರ ಪರ ವಕೀಲರಿಂದಃ</u>

ನಾನು ನಿಪಿ-3 ಕ್ಕೆ ನಿಖರವಾಗಿ ಪೋ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಆ ಸಮಯದಲ್ಲಿ ಪೊಲೀಸರು ಇದ್ದರು ಅವರ ಹೆಸರು ಗೊತ್ತಿಲ್ಲ. ಪೊಲೀಸರನ್ನು ಹೊರತುಪಡಿಸಿ ಅಲ್ಲಿ ಯಾರು ಇದ್ದರು ಎಂದು ಹೇಳಲಾಗುವುದಿಲ್ಲ. ನಾನು ಯಾವ ಚಿನ್ನದ ಆಭರಣಗಳನ್ನು ಪರಿಶೀಲಿಸಿದ್ದೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ನಾನು ಯಾವುದೇ ಚಿನ್ನದ ಆಭರಣಗಳನ್ನು ಪರಿಶೀಲಿಸಿಲ್ಲ ಆದರೂ ಕೂಡಾ ಪೊಲೀಸರ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದಿರೆ ಸರಿಯಲ್ಲ. ನಿಪಿ-3 ಕ್ಕೆ ನಾನು ಮದ್ಯಾಹ್ನ ಸಹಿ ಮಾಡಿದ್ದೇನೆ. ನಿಪಿ-3 ಕ್ಕೆ ನಾನಲ್ಲದೆ ಬೇರೆ ಯಾರು ಸಹಿ ಮಾಡಿದ್ದಾರೆಂದು ಗೊತ್ತಿಲ್ಲ.

ಪೊಲೀಸರು ತಂದದ್ದನ್ನೆಲ್ಲ ಪರೀಕ್ಷೆ ಮಾಡುವುದೇ ನನ್ನ ಕೆಲಸ. ಏಪ್ರಿಲ್ 2010 ರಲ್ಲಿ ನಾನು ಎಷ್ಟು ಚಿನ್ನದ ಆಭರಣಗಳನ್ನು ಪರಿಶೀಲಿಸಿದ್ದೇನೆ ಎಂದು ಹೇಳಲಾಗುವುದಿಲ್ಲ. ನಾನು ನಿಪಿ-3 ಕ್ಕೆ ಬಂಟ್ವಾಳದ ಪೋ. ವೃತ್ತ ಕಚೇರಿಯಲ್ಲಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-3 ರಲ್ಲಿ ಏನೆಲ್ಲಾ ಬರೆದಿದೆ ಎಂದು ಹೇಳಲಾಗುವುದಿಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1 ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.